ಓ.ಎಸ್ ನಂ. **46/2021**

ಸತ್ಯ ಪ್ರತಿಜ್ಞೆಯ ಮೇರೆಗೆ, ದಿನಾಂಕಃ **07-08-2023** ಡಿ.ಡಬ್ಲೂ - **1**

<u>**ಪಾಟೀ ಸವಾಲು:ವಾದಿ ಪರ ಶ್ರೀ ಡಿ.ಎಸ್. ಡಬ್ಲೂ ವಕೀಲರಿಂದ:**</u>

ನನ್ನ ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ನನ್ನ ತಂದೆಯವರು ಸಹಿ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿಗೆ ನಿ.ಪಿ 2 ರ ಪುಟದಲ್ಲಿ ಬರೆದುಕೊಟ್ಟವರು ಅಂತ ಇರುವ ಸಹಿಯನ್ನು ತೋರಿಸಿ ನಿಮ್ಮ ತಂದೆಯವರ ಸಹಿ ಎಂದರೆ ಸಾಕ್ಷಿ ನಮ್ಮ ತಂದೆ ಈ ರೀತಿ ಸಹಿ ಮಾಡುತ್ತಿರಲ್ಲಿಲ್ಲ ಅನ್ನುತ್ತಾರೆ. ಅವರು ಯಾವ ರೀತಿ ಸಹಿ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅವರು ಇದೆ ರೀತಿ ಸಹಿ ಮಾಡುತ್ತಿದ್ದರು ಆದರೆ ಈ ಸಹಿ ನಮ್ಮ ತಂದೆಯ ಅಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆಯವರ ಸಹಿಯನ್ನು ತೋರಿಸುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜುರುಪಡಿಸಿದ್ದು ಇರುತ್ತದೆ. ಅದು ಯಾವ ದಾಖಲೆ ಹಾಜರುಪಡಿಸಿದ್ದೇನೆ ಅನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಸಹಿ ನಮ್ಮ ತಂದೆಯವರದ್ದೆ ಆಗಿದ್ದು ಅದು ನಮ್ಮ ತಂದೆಯ ಸಹಿ ಅಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಸಹಿ ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಮಾಡಿದ್ದೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ನನಗೆ ಪಕ್ಕಾ ಮಾಹಿತಿ ಇಲ್ಲ. ಖರೀದಿ ಕೊಡುವುದನ್ನು ತಪ್ಪಿಸುವ ಸಲುವಾಗಿ ನಿಮ್ಮ ತಂದೆಯಿ ಸಹಿ ಇಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ದಿಃ 10.03.2020 ರಂದು ಪಾರ್ಷವಾಯು ಆಯಿತು. ಆ ರೀತಿ ಪಾರ್ಷವಾಯು ಆಯಿತು ಅನ್ನುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿಲ್ಲ ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ ಪಾರ್ಷವಾಯು ಆಗಿದ್ದ ಬಗ್ಗೆ ಚಿಕಿತ್ಸೆ ಕೊಡಿಸಿರುವ ಕುರಿತು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ಸನ್ 2017 ರಲ್ಲಿ ಕರಾರು ಪತ್ರ ಆಗುವ ಸಮಯದಲಿಲ ನಮ್ಮ ತಂದೆ ಆರೋಗ್ಯವಾಗಿದ್ದರು ಅವರಿಗೆ ಪಾರ್ಷವಾಯು ಆಗಿರಲಿಲ್ಲ ಎಂದರೆ ಸಾಕ್ಷಿಯು ಹೌದು ಆರೋಗ್ಯವಾಗಿದ್ದರು ಆದರೆ ಅವರಿಗೆ ಕಣ್ಣು ಕಾಣುತ್ತಿರಲಿಲ್ಲ ಕಿವಿ ಕೇಳಿಸುತ್ತಿರಲಿಲ್ಲ ಅನ್ನುತ್ತಾರೆ. ನಮ್ಮ ತಂದೆಗೆ ಕಾಣ್ಣು ಕಾಣುತ್ತಿರಲಿಲ್ಲ ಕಿವಿ ಕೇಳಿಸುತ್ತಿರಲಿಲ್ಲ ಅನ್ನುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿಲ್ಲ. ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ ನನ್ನ ಪ್ರತಿವಾದ ಪತ್ರದಲ್ಲಿ ಈ ವಿಚಾರ ಬರೆದಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರವನ್ನು ಮಾಡಿಕೊಡಬೇಕಾಗುತ್ತದ ಅನ್ನುವ ಕಾರಣಕ್ಕೆ ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀಸವಾಲಿಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸರಿ. ಇದೆ**

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ. ಎಂ. ಎಫ್. ಸಿ. ನ್ಯಾಯಾಲಯ ಅಥಣಿ.